KAMD310049132023

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು

ಉಪಸ್ಥಿತರು :

ಶ್ರೀಮತಿ ನಳಿನ ಎಸ್.ಸಿ., ಬಿ.ಎ ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮದ್ದೂರು

ದಿನಾಂಕ: **2** ನೇ ಏಪ್ರಿಲ್, **2026**

ಅಪರಾಧಿಕ ಪ್ರಕರಣ ಸಂಖ್ಯೆ: **2973/2023**

ದೂರುದಾರರು : ಕರ್ನಾಟಕ ಸರ್ಕಾರ -
ಆರಕ್ಷಕರು, ಮಂಡ್ಯ ಮಹಿಳಾ ಪೊಲೀಸ್ ಠಾಣೆ.
{ಪ್ರತಿನಿಧಿಸುವವರು ಸ.ಸ.ಅಭಿಯೋಜಕರು }

-- ವಿರುದ್ಧ --

ಆರೋಪಿತರು : ಯೋಗೇಶ್ ಬಿನ್ ರಾಮಣ್ಣ,
ವಯಸ್ಸು 33 ವರ್ಷ,
ವಾಸಃಡಿ.ಮಲ್ಲಿಗೆರೆ ಗ್ರಾಮ,
ಕೊಪ್ಪ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

(ಪ್ರತಿನಿಧಿಸುವವರು ಶ್ರೀ.ಕೆ.ಸಿ., ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 05.01.2018 |
| ಪ್ರಕರಣ ದಾಖಲು ಮಾಡಿದ ದಿನಾಂಕ | : | 25.10.2023 |
| ದೂರುದಾರರ ಹೆಸರು | : | ನಳೀನಿ.ಎಂ.ಎಸ್. |
| ಸಾಕ್ಷಿದಾರರ ವಿಚಾರಣೆಗೆ ಪ್ರಾರಂಭಿಸಿದ | : | 03.03.2026 |

| | | |
|---|---|---|
| ದಿನಾಂಕ | | |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | : | 03.03.2026 |
| ಅಪರಾಧದ ಕಲಂಗಳು | : | ಭಾರತೀಯ ದಂಡ ಸಂಹಿತೆ ಕಲಂ.498(ಎ), 504, 323, 324 ಮತ್ತು 506 |
| ತೀರ್ಪಿನ ದಿನಾಂಕ | : | 02.04.2026 |
| ತೀರ್ಪು | ಆರೋಪಿಯನ್ನು ನಿರ್ದೋಷಿಯೆಂದು ಪರಿಗಣಿಸಿ ಆದೇಶ ಮಾಡಲಾಗಿದೆ. | |

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಮದ್ದೂರು.**

<u>ತೀರ್ಪು</u>

ಪಿ.ಎಸ್.ಐ., ಮಂಡ್ಯ ಮಹಿಳಾ ಠಾಣೆ ಇವರು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.498(ಎ), 504, 323, 324 ಮತ್ತು 506 ರಡಿಯಲ್ಲಿ ಅಪರಾಧವೆಸಗಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. <u>ಪಿರ್ಯಾದುದಾರರ ದೂರಿನ ಸಾರಾಂಶ ಈ ಕೆಳಕಂಡಂತೆ ಇರುತ್ತದೆ</u>.

ದಿನಾಂಕಃ 27.05.2015 ರಂದು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ ಡಿ.ಮಲ್ಲಿಗೆರೆ ಗ್ರಾಮದ ಚಾಸಾ-2 ಹಾಗೂ ಚಾಸಾ-3 ರವರ ಮಗಳಾದ ಚಾಸಾ-1 ರವರನ್ನು ಆರೋಪಿತನಿಗೆ ಕೊಟ್ಟು ಅಬಲವಾಡಿಯ ಶ್ರೀ.ಶ್ರೀನಿವಾಸಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಕೊಟ್ಟಿದ್ದು, ಮದುವೆಯಾದ ನಂತರ ಆರೋಪಿತನ ಮನೆಯಲ್ಲಿಯೇ ವಾಸವಿದ್ದ ಚಾಸಾ-1 ರವರಿಗೆ ಸಂಸಾರದ ಸಣ್ಣಪುಟ್ಟ ವಿಚಾರಗಳಲ್ಲಿ, ಆರೋಪಿತ ಗಲಾಟೆ

ಮಾಡಿ ಕೈಯಿಂದ ಹೊಡೆಯುವುದು ಮಾಡುತ್ತಿದ್ದು, ದಿನಾಂಕಃ 15.07.2023 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಆರೋಪಿತನು ಚಾಸಾ-1 ರವರಿಗೆ ಗಲಾಟೆ ಮಾಡಿ ಹೊಲದ ಬಳಿ ಬಂದು ತನ್ನ ಜೊತೆ ಕೆಲಸ ಮಾಡು ಎಂದು ನಿಂದಿಸಿ, ಚಾಸಾ-1 ಹಾಗೂ ಮಕ್ಕಳನ್ನು ಕರೆದುಕೊಂಡು ಪ್ರತ್ಯೇಕವಾಗಿ ಹಳೆಯ ಮನೆಯಲಿದ್ದು, ಅಲ್ಲಿಯೂ ಸಹ ಆರೋಪಿಯು ಚಾಸಾ-1 ರವರಿಗೆ ಊಟಕ್ಕೂ ಬಟ್ಟೆಗೂ ತಂದು ಕೊಡದಿದ್ದಾಗ, ಚಾಸಾ-1 ರವರು ಆರೋಪಿಗೆ ಏಕೆ ಈ ರೀತಿ ಮಾಡುತ್ತೀರಿ ಎಂದು ಕೇಳಿದ್ದಕ್ಕೆ ಆರೋಪಿಯು ತಾನು ಹೀಗೆ ಇರುವುದು, ಇದ್ದರೆ ಇರು, ಇಲ್ಲದಿದ್ದರೆ ತೊಲಗು ಲೋಪರ್ ಮುಂಡೆ ಎಂದು ನಿಂದಿಸಿ, ಕೈಯಿಂದ ಹಲ್ಲೆ ಹೊಡೆದಿದ್ದು, ನಂತರ ಚಾಸಾ-1 ರವರು ಮಕ್ಕಳೊಂದಿಗೆ ಚಾಸಾ-2 ಮತ್ತು 3 ರವರ ಮನೆಗೆ ಬಂದು ವಾಸವಿದ್ದು, ದಿನಾಂಕಃ23.10.2023 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚಾಸಾ-2 ರವರ ಮನೆಗೆ ಬಂದ ಆರೋಪಿತ ಚಾಸಾ-1 ರವರ ಜೊತೆ ಮಕ್ಕಳ ವಿಚಾರಕ್ಕೆ ಜಗಳ ತೆಗೆದು ಕೈಯಿಂದ ಹಲ್ಲೆ ಮಾಡಿ ಹಾಗೂ ಅಲ್ಲೆ ಇದ್ದ ದೊಣ್ಣೆಯಿಂದ ಮೈ ಮೇಲೆ ಹಲ್ಲೆ ಮಾಡಿ, ಕುತ್ತಿಗೆ ಹಿಡಿದು ಎಳೆದಾಡಿ ಚಾಸಾ-1 ರವರಿಗೆ ಕುತ್ತಿಗೆಯ ಬಲಭಾಗದಲ್ಲಿ, ಕುತ್ತಿಗೆಯ ಬಳಿ, ಬಲಮೊಣಕೈ ಬಳಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ,`ನಿನ್ನನ್ನು ಕೊಚ್ಚಿ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುವುದಾಗಿ ಪಿರ್ಯಾದುದಾರರು ದೂರನ್ನು ನೀಡಿರುತ್ತಾರೆ.

3. ಪಿರ್ಯಾದುದಾರರ ದೂರನ್ನು ಸ್ವೀಕರಿಸಿ, ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.498(ಎ), 504, 323, 324 ಮತ್ತು 506ರಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಅದರಂತೆ ತನಿಖಾಧಿಕಾರಿಯು ಪ್ರಕರಣದ ಸಂಪೂರ್ಣ ತನಿಖೆಯನ್ನು ಮಾಡಿ ಭಾರತೀಯ ದಂಡ ಸಂಹಿತೆ ಕಲಂ.498(ಎ), 504, 323, 324 ಮತ್ತು 506ರಡಿಯಲ್ಲಿ ಆರೋಪಿ ವಿರುದ್ಧ ದೋಷಾರೋಪಣೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

4. ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.498(ಎ), 504, 323, 324

ಮತ್ತು 506ರಡಿಯಲ್ಲಿ ಸಂಜ್ಞತೆಯನ್ನು ತೆಗೆದುಕೊಂಡಿದೆ. ಆರೋಪಿಗೆ ನ್ಯಾಯಾಲಯದಿಂದ ಸಮನ್ಸ್ ಅನ್ನು ಜಾರಿ ಮಾಡಿದ್ದು, ಆರೋಪಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ಜಾಮೀನು ಅರ್ಜಿಯನ್ನು ಸಲ್ಲಿಸಿರುತ್ತಾರೆ. ನ್ಯಾಯಾಲಯವು ಆರೋಪಿ ಪರ ವಕೀಲರು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಪರಿಶೀಲಿಸಿ, ಸೂಕ್ತ ಷರತ್ತುಯುಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತದೆ. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.207ರ ಅಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿರುತ್ತದೆ.

5. ನಂತರ ಆರೋಪಿ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಅದನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಅವರು ಹೇಳಿದ ಉತ್ತರವನ್ನು ದಾಖಲಿಸಿದಾಗ ಅವರು ಪ್ರಕರಣವು ವಿಚಾರಣೆಯಾಗಬೇಕೆಂದು ಕೋರಿದ್ದರಂತೆ ಸಾಕ್ಷಿಗಳ ವಿಚಾರಣೆಯನ್ನು ನಡೆಸಿರುತ್ತಾರೆ.

6. ಆರೋಪಿ ವಿರುದ್ದ ಸಲ್ಲಿಸಿರುವ ಪ್ರಕರಣವನ್ನು ರುಜುವಾತುಪಡಿಸುವ ಉದ್ದೇಶದಿಂದ ಅಭಿಯೋಜನೆಯವರು ಚಾಸಾ-1 ರವರನ್ನು ವಿಚಾರಣೆ ಮಾಡಿದ್ದು, ನಿಪಿ-1 ರಿಂದ 11 ರಂತೆ ದಾಖಲೆಗಳನ್ನು ಹಾಗೂ ಎಂ.ಓ.1 ಮುದ್ದೆಮಾಲುಗಳನ್ನು ಗುರುತಿಸಿರುತ್ತಾರೆ.

7. ಅಭಿಯೋಜನೆಯ ಪರವಾಗಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ ಸಾಕ್ಷಿದಾರರಾದ ಚಾಸಾ-1 ರವರನ್ನು ಪ್ರಾಸಾ-1 ರಂತೆ ಸಾಕ್ಷ್ಯವನ್ನು ನುಡಿದಿದ್ದು, ನಿಶಾನೆ ಪಿ.1 – ದೂರು, ನಿಶಾನೆ ಪಿ.2 ಮತ್ತು 3 – ಮಹಜರ್ ಗಳು, ನಿಶಾನೆ ಪಿ.4 ಮತ್ತು 5 – ಅಮಾನತ್ತು ಮಹಜರ್ ಗಳು, ನಿಶಾನೆ ಪಿ.6 ರಿಂದ 9 ಫೊಟೋಗಳು, ನಿಶಾನೆ ಪಿ.10 ಲಗ್ನಪತ್ರಿಕೆ ಮತ್ತು ನಿಶಾನೆ ಪಿ.11 ಪ್ರಾಸಾ-1 ರವರ ಹೇಳಿಕೆ ಎಂದು ನಿಶಾನೆಗೊಳಿಸಲಾಗಿರುತ್ತದೆ.

8. ಅಭಿಯೋಜನೆಯ ಪರ ವಿಚಾರಣೆ ಮಾಡಲಾದಂತಹ ಸಾಕ್ಷಿದಾರರ ವಿಚಾರಣೆಯಲ್ಲಿ ಆರೋಪಿಗೆ ವಿರುದ್ಧವಾಗಿರುವಂತಹ ಯಾವುದೇ ಸಾಕ್ಷ್ಯಗಳು ಕಂಡು ಬರದೇ ಇರುವ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಹೇಳಿರುವಂತೆ ಆರೋಪಿಯ ಹೇಳಿಕೆಗಳನ್ನು ದಾಖಲು ಮಾಡುವುದನ್ನು ಕೈ ಬಿಡಲಾಗಿರುತ್ತದೆ. ಆರೋಪಿ ತಮ್ಮ ಪರವಾಗಿ ಯಾವುದೇ ಸಾಕ್ಷಿಗಳನ್ನು ಈ ಪ್ರಕರಣದಲ್ಲಿ ವಿಚಾರಣೆ ಮಾಡಿರುವುದಿಲ್ಲ.

9. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಯಿತು.

10. ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳ ರೀತ್ಯಾ ನನ್ನ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

<u>ಅಂಶಗಳು</u>

1. ದಿನಾಂಕ:27.05.2015 ರಂದು ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ಕೊಪ್ಪ ಹೋಬಳಿ ಡಿ.ಮಲ್ಲಿಗೆರೆ ಗ್ರಾಮದ ವಾಸಿ ಚಾಸಾ-2 ಹಾಗೂ ಚಾಸಾ-3 ರವರ ಮಗಳಾದ ಚಾಸಾ-1 ರವರನ್ನು ಆರೋಪಿಗೆ ಕೊಟ್ಟು ಅಬಲವಾಡಿಯ ಶ್ರೀ.ಶ್ರೀನಿವಾಸಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಕೊಟ್ಟಿದ್ದು, ಮದುವೆಯಾದ ನಂತರ ಆರೋಪಿತನ ಮನೆಯಲ್ಲಿಯೇ ವಾಸವಿದ್ದು, ನಂತರದ ದಿನಗಳಲ್ಲಿ ಆರೋಪಿಯು ಚಾಸಾ-1 ರವರ ಜೊತೆ ತೀಟೆ ಜಗಳ ತೆಗೆದು ಗಲಾಟೆ ಮಾಡಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ನೀಡುತ್ತಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 498(ಎ) ರಡಿಯಲ್ಲಿ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

2. ಅದೇ ದಿನ, ಅದೇ ವೇಳೆ ಹಾಗೂ ಅದೇ ಸ್ಥಳದಲ್ಲಿ,ಆರೋಪಿಯು ಚಾಸಾ-1 ರವರನ್ನು ಉದ್ದೇಶಿಸಿ, ಬಾಯಿಗೆ ಬಂದಂತೆ ಅವಾಚ್ಯ

ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗವನ್ನುಂಟು ಮಾಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 504 ರಡಿಯಲ್ಲಿ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

3. ಅದೇ ದಿನ, ಅದೇ ವೇಳೆ ಹಾಗೂ ಅದೇ ಸ್ಥಳದಲ್ಲಿ,ಆರೋಪಿಯು ತಮ್ಮ ಕೈಗಳಿಂದ ಚಾಸಾ-1 ರವರಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 323 ರಡಿಯಲ್ಲಿ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

4. ಅದೇ ದಿನ, ಅದೇ ವೇಳೆ ಹಾಗೂ ಅದೇ ಸ್ಥಳದಲ್ಲಿ,ಆರೋಪಿಯು ದೊಣ್ಣೆಯಿಂದ ಚಾಸಾ-1 ರವರ ಮೈಮೇಲೆ ಹಲ್ಲೆ, ಕುತ್ತಿಗೆಯ ಬಳಿ, ಬಲಮೊಣಕ್ಕೆ ಬಳಿ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುತ್ತೀರಿ, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 324 ರಡಿಯಲ್ಲಿ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

5. ಅದೇ ದಿನ, ಅದೇ ವೇಳೆ ಹಾಗೂ ಅದೇ ಸ್ಥಳದಲ್ಲಿ,ಆರೋಪಿಯು ಚಾಸಾ-1 ರವರೊಂದಿಗೆ ಜಗಳ ಮಾಡಿ ನಿನ್ನನ್ನು ಕೊಚ್ಚಿ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 506 ರಡಿಯಲ್ಲಿ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

6. ಏನು ಆದೇಶ ?

11. ನ್ಯಾಯಾಲಯದ ಸಮ್ಮುಖ ಸಲ್ಲಿಸಲಾಗಿರುವ ಎಲ್ಲಾ ದಾಖಲೆಗಳನ್ನು ಪರೀಶೀಲಿಸಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರವನ್ನು ನೀಡಲಾಗಿದೆ.

| | | |
|---|---|---|
| ಅಂಶ 1 | : | ನಕಾರಾತ್ಮಕವಾಗಿ, |
| ಅಂಶ 2 | : | ನಕಾರಾತ್ಮಕವಾಗಿ, |

ಅಂಶ 3 : ನಕಾರಾತ್ಮಕವಾಗಿ,
ಅಂಶ 4 : ನಕಾರಾತ್ಮಕವಾಗಿ,
ಅಂಶ 5 : ನಕಾರಾತ್ಮಕವಾಗಿ,
ಅಂಶ 6 : ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು :

12. **ಅಂಶ 1 ರಿಂದ 5 : -** ಅಂಶ 1 ರಿಂದ 5 ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಚರ್ಚಿಸಲಾಗಿದೆ.

13. ದಿನಾಂಕಃ 27.05.2015 ರಂದು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ ಡಿ.ಮಲ್ಲಿಗೆರೆ ಗ್ರಾಮದ ಚಾಸಾ-2 ಹಾಗೂ ಚಾಸಾ-3 ರವರ ಮಗಳಾದ ಚಾಸಾ-1 ರವರನ್ನು ಆರೋಪಿತನಿಗೆ ಕೊಟ್ಟು ಅಬಲವಾಡಿಯ ಶ್ರೀ.ಶ್ರೀನಿವಾಸಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಕೊಟ್ಟಿದ್ದು, ಮದುವೆಯಾದ ನಂತರ ಆರೋಪಿತನ ಮನೆಯಲ್ಲಿಯೇ ವಾಸವಿದ್ದ ಚಾಸಾ-1 ರವರಿಗೆ ಸಂಸಾರದ ಸಣ್ಣಪುಟ್ಟ ವಿಚಾರಗಳಲ್ಲಿ, ಆರೋಪಿತ ಗಲಾಟೆ ಮಾಡಿ ಕೈಯಿಂದ ಹೊಡೆಯುವುದು ಮಾಡುತ್ತಿದ್ದು, ದಿನಾಂಕಃ 15.07.2023 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಆರೋಪಿತನು ಚಾಸಾ-1 ರವರಿಗೆ ಗಲಾಟೆ ಮಾಡಿ ಹೊಲದ ಬಳಿ ಬಂದು ತನ್ನ ಜೊತೆ ಕೆಲಸ ಮಾಡು ಎಂದು ನಿಂದಿಸಿ, ಚಾಸಾ-1 ಹಾಗೂ ಮಕ್ಕಳನ್ನು ಕರೆದುಕೊಂಡು ಪ್ರತ್ಯೇಕವಾಗಿ ಹಳೆಯ ಮನೆಯಲಿದ್ದು, ಅಲ್ಲಿಯೂ ಸಹ ಆರೋಪಿಯು ಚಾಸಾ-1 ರವರಿಗೆ ಊಟಕ್ಕೂ ಬಟ್ಟೆಗೂ ತಂದು ಕೊಡದಿದ್ದಾಗ, ಚಾಸಾ-1 ರವರು ಆರೋಪಿಗೆ ಏಕೆ ಈ ರೀತಿ ಮಾಡುತ್ತೀರಿ ಎಂದು ಕೇಳಿದ್ದಕ್ಕೆ ಆರೋಪಿಯು ತಾನು ಹೀಗೆ ಇರುವುದು, ಇದ್ದರೆ ಇರು, ಇಲ್ಲದಿದ್ದರೆ ತೊಲಗು ಲೋಫರ್ ಮುಂಡೆ ಎಂದು ನಿಂದಿಸಿ, ಕೈಯಿಂದ ಹಲ್ಲೆ ಹೊಡೆದಿದ್ದು, ನಂತರ ಚಾಸಾ-1 ರವರು ಮಕ್ಕಳೊಂದಿಗೆ ಚಾಸಾ-2 ಮತ್ತು 3 ರವರ ಮನೆಗೆ ಬಂದು ವಾಸವಿದ್ದು, ದಿನಾಂಕಃ23.10.2023 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚಾಸಾ-2 ರವರ ಮನೆಗೆ ಬಂದ ಆರೋಪಿತ ಚಾಸಾ-1 ರವರ ಜೊತೆ ಮಕ್ಕಳ

ವಿಚಾರಕ್ಕೆ ಜಗಳ ತೆಗೆದು ಕೈಯಿಂದ ಹಲ್ಲೆ ಮಾಡಿ ಹಾಗೂ ಅಲ್ಲೆ ಇದ್ದ ದೊಣ್ಣೆಯಿಂದ ಮೈ ಮೇಲೆ ಹಲ್ಲೆ ಮಾಡಿ, ಕುತ್ತಿಗೆ ಹಿಡಿದು ಎಳೆದಾಡಿ ಚಾಸಾ-1 ರವರಿಗೆ ಕುತ್ತಿಗೆಯ ಬಲಭಾಗದಲ್ಲಿ, ಕುತ್ತಿಗೆಯ ಬಳಿ, ಬಲಮೊಣಕೈ ಬಳಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ,`ನಿನ್ನನ್ನು ಕೊಚ್ಚಿ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುವುದಾಗಿ ಪಿರ್ಯಾದುದಾರರು ದೂರನ್ನು ನೀಡಿರುತ್ತಾರೆ.

14. ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಚಾಸಾ-1/ಪ್ರಾ.ಸಾ.1 ನಳೀನ ರವರು ಪಿರ್ಯಾದುದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-2 ಮತ್ತು 3 ತನ್ನ ತಂದೆ, ತಾಯಿ, ಚಾಸಾ-4 ತನ್ನ ಸಹೋದರ, ಚಾಸಾ-5 ರಿಂದ 11 ತನ್ನ ಸಂಬಂಧಿಕರು ಎಂದು, ಆರೋಪಿ ತನ್ನ ಗಂಡ, ಆರೋಪಿ ಮತ್ತು ತನ್ನ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದು, ತನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಮಾನಸಿಕ ಮತ್ತು ದೈಹಿಕವಾಗಿ ವರದಕ್ಷಿಣೆ ಕಿರುಕುಳ ನೀಡಿಲ್ಲ, ತಾನು ಹಲ್ಲೆಯ ಹಿನ್ನೆಲೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದು, ತಾನು ಈ ಬಗ್ಗೆ ಯಾವುದೇ ದೂರು ದಾಖಲಿಸಿಲ್ಲ ಮತ್ತು ಯಾವುದೇ ಹೇಳಿಕೆ ನೀಡಿಲ್ಲ ಎಂದು, ದುಾರು ಮತ್ತು 2 ಸ್ಥಳ ಮಹಜರ್ ಹಾಗೂ 2 ಅಮಾನತ್ತು ಮಹಜರ್ ಗಳನ್ನು ನಿಪಿ-1 ರಿಂದ 5 ಕ್ಕೆ ತನ್ನ ಸಹಿಗಳನ್ನು ನಿಪಿ-1(ಎ) ರಿಂದ 5(ಎ) ರಂತೆ ಗುರುತಿಸಿಕೊಂಡು, ಸದರಿ ವೇಳೆಯಲ್ಲಿ ಏನನ್ನು ಅಮಾನತ್ತುಪಡಿಸಿಲ್ಲ ಎಂದು, ಸದರಿ ಸಹಿಗಳನ್ನು ಪೊಲೀಸರ ಕೋರಿಕೆಯ ಮೇರೆಗೆ ಮಾಡಿದ್ದೇನೆ ಎಂದು, ತನ್ನನ್ನು ಹೊರತಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ತನಗೆ ಗೊತ್ತಿಲ್ಲ ಎಂದು, ಅದರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಸಾಕ್ಷ್ಯವನ್ನು

ನುಡಿದಿರುವುದಿಲ್ಲ. ಸದರಿ ಸಾಕ್ಷಿದಾರರು ಅಭಿಯೋಜನೆ ಪರವಾಗಿ ಯಾವುದೇ ಸಾಕ್ಷ್ಯವನ್ನು ನೀಡಿಲ್ಲದ ಕಾರಣ ಆರೋಪಿ ವಿರುದ್ಧ ಹೊರಿಸಿದ ಆರೋಪಗಳನ್ನು ಸಾಬೀತು ಮಾಡಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

15. ಸದರಿ ಪಿರ್ಯಾದುದಾರರು ಅಭಿಯೋಜನೆಯ ಪರವಾಗಿ ಯಾವುದೇ ಸಾಕ್ಷ್ಯವನ್ನು ನೀಡಿಲ್ಲದ ಕಾರಣ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳನ್ನು ಸಾಬೀತು ಮಾಡಲು ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸುವಂತೆ ಕೋರಿದ್ದರು. ಆದರೆ ಪ್ರಕರಣದ ಪಿರ್ಯಾದುದಾರರೇ ಅಭಿಯೋಜನೆಯ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರನ್ನು ಕರೆಯಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಪರಿಗಣಿಸಿ ಅಭಿಯೋಜನೆಯ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿದೆ.

16. ಈ ಪ್ರಕರಣದಲ್ಲಿ ಫ್ರಾ.ಸಾ-1 ಇವರು ಪಿರ್ಯಾದುದಾರರೇ ಅಭಿಯೋಜನೆಯ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನೆಯು ಪಿರ್ಯಾದಿಯಲ್ಲಿ ನಮೂದಿಸಿರುವ ಅಂಶಗಳನ್ನು ಸಾಬೀತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತಾರೆ. ಅಭಿಯೋಜನೆಯ ಸಾಕ್ಷ್ಯದಲ್ಲಿ ಆರೋಪಿತರ ಮೇಲೆ ಆರೋಪಿಸಿದ ಅಪರಾಧಗಳನ್ನು ಮಾಡಿದ್ದಾರೆಂದು ರುಜುವಾತುಪಡಿಸುವ ಯಾವುದೇ ಸಾಕ್ಷ್ಯಧಾರಗಳು ಇಲ್ಲ. ಈ ಮೇಲ್ಕಂಡ ಕಾರಣಗಳಿಗಾಗಿ ಅಭಿಯೋಜನೆಯು ಆರೋಪಿ ವಿರುದ್ಧ ಆರೋಪಿಸಿದ

ಆರೋಪಗಳನ್ನು ಸಾಬೀತು ಪಡಿಸುವಲ್ಲಿ ವಿಫಲವಾಗಿದೆ. ಆದ್ದರಿಂದ ಅಂಶ **1** ರಿಂದ **5** ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

17. ಅಂಶ **6:** - ಈ ಮೇಲ್ಕಂಡ ಚರ್ಚೆಗಳ ಆಧಾರದಂತೆ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.498(ಎ), 504, 323, 324 ಮತ್ತು 506 ರಡಿಯಲ್ಲಿನ ಆಪಾದನೆ ಸಾಬೀತಾಗದೇ ಇರುವುದರಿಂದ ಆರೋಪಿಯು ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆಗೊಳಿಸಲು ಆದೇಶಿಸಿದೆ.

ಆರೋಪಿ ಪರ ಜಾರಿಗೊಳಿಸಿರುವ ಬಂಧ ಪತ್ರವನ್ನು ಹಾಗೂ ಸದರಿಯವರ ಪರ ಜಾಮೀನುದಾರರು ಜಾರಿಗೊಳಿಸಿರುವ ಜಾಮೀನು ಮುಚ್ಚಳಿಗೆ ಪತ್ರವನ್ನು ಸಹ ಈ ಮೂಲಕ ರದ್ದುಗೊಳಿಸಿದೆ.

ದಂಡ ಪ್ರಕ್ರಿಯೆ ಸಂಹಿತೆ ಕಲಂ 436 ರಡಿಯಲ್ಲಿ ಆರೋಪಿಗೆ ಈಗಾಗಲೇ ಜಾಮೀನು ನೀಡಿದ್ದು ಅದನ್ನು ಪರಿಗಣಿಸಲಾಗಿದೆ.

ಈ ಪ್ರಕರಣದಲ್ಲಿ ಪಿ.ಎಫ್. ನಂ.74/2023 ರಡಿ ದಿನಾಂಕ 28.11.2023 ರಂದು ಅಮಾನತ್ತು ಪಡಿಸಿಕೊಂಡಿರುವ ಒಂದು ಬಿದಿರು ದೊಣ್ಣೆಯನ್ನು ಬೆಲೆ ಬಾಳದ ಅನುಪಯುಕ್ತ ವಸ್ತುವಾದ್ದರಿಂದ

ಮೇಲ್ಮನವಿಯ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಲಾಗಿದೆ.

*(ಶೀಘ್ರ ಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಪರಿಷ್ಕರಿಸಿ, ತಿದ್ದುಪಡಿ ಮಾಡಿ ಈ ದಿವಸ ಅಂದರೆ ದಿನಾಂಕ 2ನೇ ಏಪ್ರಿಲ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)*

**( ನಳಿನ ಎಸ್.ಸಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

## ಅನುಬಂಧ

1. ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ.

ಪ್ರಾ.ಸಾ-1 - ನಳೀನಿ.

2. ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :

3.

| | |
|---|---|
| ನಿಶಾನೆ ಪಿ.1 | - ದೂರು. |
| ನಿಶಾನೆ ಪಿ.1 ಎ | - ಪ್ರಾಸಾ-1 ರವರ ಸಹಿ. |
| ನಿಶಾನೆ ಪಿ.2 ಮತ್ತು 3 | - ಸ್ಥಳ ಮಹಜರ್ ಗಳು. |
| ನಿಶಾನೆ ಪಿ.2 ಎ,3 ಎ | - ಪ್ರಾಸಾ-1 ರವರ ಸಹಿಗಳು. |
| ನಿಶಾನೆ ಪಿ.4 ಮತ್ತು 5 | - ಅಮಾನತ್ತು ಮಹಜರ್ ಗಳು. |
| ನಿಶಾನೆ ಪಿ.4 ಎ,5 ಎ | - ಪ್ರಾಸಾ-1 ರವರ ಸಹಿಗಳು. |
| ನಿಶಾನೆ ಪಿ.6 ರಿಂದ 9 | - ಫೋಟೋಗಳು. |
| ನಿಶಾನೆ ಪಿ.10 | - ಲಗ್ನಪತ್ರಿಕೆ. |
| ನಿಶಾನೆ ಪಿ.11 | - ಪ್ರಾಸಾ-1 ರವರ ಹೇಳಿಕೆ. |

3. ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ವಿವರ:

- ಇಲ್ಲಾ -

4. ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :

- ಇಲ್ಲಾ -

5. ಅಭಿಯೋಜನೆಯು ಗುರುತಿಸಿರುವ ಮುದ್ದೆ ಮಾಲುಗಳ ಪಟ್ಟಿ

ಮುದ್ದೆಮಾಲು-1 - ಒಂದು ಬಿದಿರಿನ ದೊಣ್ಣೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.